



# ಲಂಕೆ

ಕಟ್ಟಿಗೆ, ಕನಸ ಅಡವಿಕ್ಕಿ ಇಟ್ಟಿಗೆ ಕಲ್ಲಂತಾಗಲು ನೆತ್ತರೇ ಹವಿಸ್ಸು.
ಒಳಗೆ ಇನ್ನೂ ಆರದ ಕಾವು.
ಕಟ್ಟಿದ ಸಪ್ನನಗರಿಯೊಳಗೆ ನಗಾರಿಸದ್ದಿನ ಹಬೆಯಾಡುವ ಸರಹದ್ದಿನ ಮುಂಜಾವು.

ಮುದ್ರೆಯುಂಗುರದ ಮೊಹರ ಸೊಕ್ಕಿನ ಮಡಿಲು,
ಬಲಾತ್ಕಾರವ ಭಂಗಗೊಳಿಸುವ ಅಶಾಂತ ಕಡಲು.
ಹಾರಾಡಲೇ ಬೇಕಾದ ಬಣ್ಣವೆರಚುವ ಬಾವುಟ,
ಕಾಡಿ ತಿನ್ನುವ ಭಾವ ಭಂಗಿಗಳ ಆರ್ಭಟ.

ಅಶೋಕ ಮರದ ನೆರಳಿಗೂ ಸೋಕಿದ ಸೂತಕ,
ಬಯಸಿ ಬೀಳಿಸಿ ಬೀಸುವ ಗಾಳಿಗೂ ವ್ಯಾಪಕ.
ಸನಿಹ ಸಂಗದ ದ್ವೀಪದಲ್ಲಿ ಒಂದು ಕೈ ಮೇಲಾಗುವ ಭೂಮಿ ತೂಕ!

ನೀಲಾಕಾಶ ಮೇಲೆ ಕೆಳಗೆ ನೀರಲ್ಲಿ ಮುಳುಗದ ನಕ್ಷತ್ರ.
ಸಾಗರವಿದು ದಾಟಲಾಗದು, ಎನ್ನುವುದೂ ತಪ್ಪು.
ಕಲ್ಲೂ ತೇಲುತ್ತಿದೆ, ನಡೆಯುತ್ತಿದೆ ಏನೇನೋ ವಿಚಿತ್ರ!
ಕಾಲಡಿ ಬಿದ್ದ ಮರಳೂ
ಕತ್ತು ಕೊಂಕಿಸಿ
ನೇರ ಕಣ್ಣಿಗೆ ತೂರುವ
ಆ ನಿನ್ನ ಚಿತ್ರ.



ಹತ್ತು ತಲೆಗೆ ಹತ್ತೇ ಬಾಯಿ
ಇಪ್ಪತ್ತು ಕಣ್ಣು.
ಪಂಚೇಂದ್ರಿಯಗಳ ಲೆಕ್ಕ ತಪ್ಪುತ್ತದೆ, ಪ್ರತಿಬಾರಿಯೂ.
ಗೆರೆ ದಾಟುವುದಕ್ಕೆ ಮುಟ್ಟಿ ಮುರಿಯುವುದಕ್ಕೆ.

ಕೊನೆಗೆ ಉಳಿದದ್ದು, ಒಮ್ಮೆಯೂ ತಿರುಗಿ ನೋಡದೇ,
ನೆಲದ ಎದೆಯೊಳಗೆ ಇಳಿದ ಸುಟ್ಟಗಾಯದ ಶಂಕೆ!
ರಾವಣನ ಎದೆತಂತುಗಳ ಮೀಟಿ ಹಿಡಿದು,
ಧಗಧಗಿಸುತ್ತಿರುವ ಲಂಕೆ!

● **ಆರತಿ ಎಚ್.ಎನ್.**

ಕಲೆ: ರೂಪ ಹಾಸನ